*ಎಂ.ಎಸ್.ಧರ್ಮೇಂದ್ರ, ಜಿಟಿಟಿಆರ್‌ಇ ಕ್ಯಾಂಪಸ್*
*ಹತ್ತಿ ಬಟ್ಟೆ ಧರಿಸುತ್ತಿದ್ದ ರಾಜಕಾರಣಿಗಳಿಗೂ, ಜೀನ್ಸ್ ತೊಡುತ್ತಿರುವ ರಾಜಕಾರಣಿಗಳಿಗೂ ಏನು ವ್ಯತ್ಯಾಸ?*



ವಸ್ತ್ರವೊಂದೇ; ದುರ್ಗುಣಗಳು ರಾಜಕಾರಣಿಗಳ ಜೀನ್ಸ್‌ಗೇ ಹತ್ತಿಬಿಟ್ಟಿರುತ್ತವೆ!

*ಆರ್. ವಿಜಯಲಕ್ಷ್ಮಿ, ಕೊಳ್ಳೇಗಾಲ*
*ಕನ್ನಡಿಗರೇ ಇತರರಿಗೆ ಮಣೆ ಹಾಕಿದರೆ ಇಲ್ಲಿರುವ ಕನ್ನಡಿಗರ ಗತಿ ಏನು?*
ಮಣೆಯೇ ಬೇಕೆಂಬ ಹಠ ಬೇಡ, ಡೈನಿಂಗ್ ಟೇಬಲ್ ಬಳಸಿರಿ!

*ಶ್ವೇತಾಲಕ್ಷ್ಮಿ ಅಮ್ಮೆ, ಬೆಂಗಳೂರು*
*ಅಂದು 'ಅತಿಥಿ ದೇವೋ ಭವ' ಎನ್ನುತ್ತಿದ್ದರು, ಈಗ ಅತಿಥಿಗಳು ಬಂದರೆ ಮೂಗು ಮುರಿಯುವರಲ್ಲಾ...?*
ಹಾಗೇನಿಲ್ಲ; ಈಗಲೂ 'ಅತಿಥಿಯೇ, ನೀನು ದೇವನೇ ಆಗಿಬಿಡು; ಕಣ್ಣಿಗೆ ಕಾಣದಂತೆಯೇ ಇರು' ಎನ್ನುತ್ತಾರೆ!

*ಎಚ್.ಆರ್. ದೇಸಾಯಿ, ರಾಯಚೂರು*
*ದೇವೇಗೌಡರನ್ನು 'ಲಾಫಿಂಗ್ ಬುದ್ಧ'ನ ಮುಂದೆ ಕೂಡಿಸಿದರೆ ಗೌಡರು ನಗಬಹುದೆ? ಅಥವಾ, ಬುದ್ಧನೇ ತನ್ನ ನಗುವನ್ನು ನಿಲ್ಲಿಸಬಹುದೇ?*



ಬುದ್ಧನ ಮುಂದೆ ಶೋಭಾ ಕರಂದ್ಲಾಜೆಯನ್ನು ಕೂಡಿಸಿ ಗೌಡರು ಎದ್ದು ಹೋಗಿಬಿಡುವರಂತೆ!

*ಜಗದೀಶ ಎಮ್.ಎನ್, ನಗರ*
*ಮದುವೆಯಾಗಿದೆ ಎನ್ನಲು ಹೆಂಗಸಿಗೆ ಗುರುತು ತಾಳಿ, ಗಂಡಸಿಗೆ?*
'..... ಗಂಡನ ಕೈಯಲ್ಲಿ ಬ್ಯಾಗು, ಮಗು!' ಎನ್ನುತ್ತಾರೆ ಹನಿಗವನರಾಜ ಡುಂಡಿ!

*ಕಂಡಕ್ಟರ್ ರಾಜು, ಗುಬ್ಬಿ*
*'ಹುಡುಗಿಯನ್ನು ಒಲಿಸಿಕೊಳ್ಳುವ ಸುಲಭ ಮಾತುಗಳು? ಅಂತ ಪುಸ್ತಕ ಬರೀತಿದೀನಿ; ನಿಮ್ಮ ಸಲಹೆ'*
ಗುಡ್. ಆರ್ಟ್ ಆಫ್ ಲಿವಿಂಗ್ ತರಹವೇ ಇದೂ ಕರ್ತೃವಿಗೆ ಮಾತ್ರ ಲಾಭದಾಯಕವಾಗುವುದು ಖಚಿತ!

*ಜಾಕೋಬ್ ಡಿಸೋಜ, ಕುರುವಳ್ಳಿ*
*ತ್ರಿಕೋಣ ಪ್ರೇಮದ ಅಂತ್ಯ ಸಾವಿನಲ್ಲೇ ಕೊನೆಗೊಳ್ಳುವುದೇಕೆ?*
ತ್ರಿ ಕೋಣಗಳಿರುವುದರಿಂದ; ತ್ರಿ ಜಾಣರಿದ್ದರೆ ಹೀಗೆ ಆಗುತ್ತಿರಲಿಲ್ಲ!

*ಮಹಾವೀರ ಕಾಸಾರ, ಶಿವಮೊಗ್ಗ*
*ಬೆಲೆ ಏರಿಕೆ ಆಗದ ವಸ್ತು ಯಾವುದು?*
ಅಂಕಿ!

*ವೆಂಕಟೇಶ ಎಂ. ಮಹಾಲೆ, ಸಾಂಬ್ರಾಣಿ*
*'ನಾನು' ಅಳಿದರೆ ಉಳಿಯೋದು ಯಾವುದು?*
ವಿಲ್ಲು!

*ವಿ. ಹಮೀದ್, ವಿಟ್ಲ*
*ಲವರ್ ಕೈಬಿಡುವ ಹಂತದಲ್ಲಿದ್ದಾಳೆ, ಏನು ಮಾಡಲಿ?*
ಛೆ, ಹೀಗಾಗಬಾರದಿತ್ತು. ಇನ್ನೇನ್ಮಾಡಕ್ಕಾಗತ್ತೆ, ಕೈ ಹಿಡಿದವಳ ಬಳಿಗೇ ಮರಳಿ!

*ಎಂ.ಜಿ. ಶಿವರಾಂ, ಬೆಂಗಳೂರು*
*ಕನ್ನಡಿಗರು ತಮ್ಮ ಔದಾರ್ಯದ ಉರುಳಲ್ಲಿ ತಾವೇ ಸಿಕ್ಕಿ ನರಳುತ್ತಿದ್ದಾರೆ. ಇದಕ್ಕೆ ಪರಿಹಾರವೇನು?*
ಕೆರಳಿ ಕೊರಳೆತ್ತಿದರೆ ಉರುಳಿನಿಂದ ಉರುಳಿ ಉಳಿಯಬಹುದೆಂದು ತಿಳಿದರಾಯ್ತು!

*ಎಂ. ಪರಮೇಶ್ವರ, ಮದ್ದೀಹಳ್ಳಿ*
*ಮನುಷ್ಯನಿಗೆ ಅಹಂಕಾರ ಬಂದರೆ ಸುಮ್ಮನೆ ಹೋಗುವುದಿಲ್ಲವೇಕೆ?*
ಯಾವ ಕಾರವಾದರೂ ಅಷ್ಟೆ, ನೆತ್ತಿಗೆ ಹತ್ತಿ, ಚೆನ್ನಾಗಿ ನೀರು ಕುಡಿಸಿದ ನಂತರವೇ ನಿರ್ಗಮನ!

*ನರಸಿಂಹ ಎಂ. ಪೈ, ಕಾಸರಕೋಡ*
*ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎನ್ನುವುದೇಕೆ?*
ವೇದಕ್ಕೆ ಮೂಲ ಸಂಗ್ರಹಿತ ಶಾಸ್ತ್ರಸಾರ; ಗಾದೆಗೆ ಮೂಲ ಸಂಕಷ್ಟದ ಸಂಸಾರ!

*ವಿ.ಎಸ್. ಅವಧಾನಿ, ಹೊನ್ನಾವರ*
*ಕುಳ್ಳ ಹೆಂಡತಿ ಲೇಸು ಎಂದು ಸರ್ವಜ್ಞ ಅಪ್ಪಣೆ ಕೊಡಿಸಿರಲು ಏನು ಕಾರಣ?*
ಎತ್ತರವಿದ್ದರೆ ಸಿಕ್ಕಸಿಕ್ಕಾಗ ಗಂಡನ ತಲೆಗೆ ಮೊಟಕುವಳೆಂದು!

## ಬಹುಮಾನಿತ ಪ್ರಶ್ನೆ

*ಸಿ.ಎನ್. ವಿಜಯಲಕ್ಷ್ಮಿ, ಶಿವಮೊಗ್ಗ*
*ಹುಡುಗ ಗುಲಾಬಿ ಹೂ ಕೊಡಲು ಹುಡುಗಿಯ ಮುಂದೆ ಮಂಡಿಯೂರಿ ಏಕೆ ಕುಳಿತುಕೊಳ್ಳುತ್ತಾನೆ?*
ಒಪ್ಪಿದರೆ ಎದ್ದು ನಿಲ್ಲಲು, ಒಪ್ಪದಿದ್ದರೆ ಹಾಗೆಯೇ ಮಲಗಿಬಿಡಲು!

*ಎನ್. ಪ್ರಕಾಶ, ದೇವನಹಳ್ಳಿ*
*ಸತ್ಯವಾದರೂ ಸತಾಯಿಸಿ ನೋಡಬೇಕಂತೆ, ಹೌದಾ ಸಾರ್?*
'ಅಹುದಹುದು' ಎಂದಿತು ವಕೀಲ ಪಡೆ!


*ಬಿ.ಎಂ. ಪರಶಿವಮೂರ್ತಿ, ಬೆಂಗಳೂರು*
*ಹೆಣ್ಣನ್ನು ಒಲಿದರೆ ನಾರಿ, ಮುನಿದರೆ ಮಾರಿ ಅಂತಾರೆ, ಗಂಡನ್ನು ಏನಂತಾರೆ?*
ಒಲಿದರೆ ಗಂಡ, ಮುನಿದರೆ ಯಮಗಂಡ!

*ಎನ್. ಗೋಪಾಲರಾವ್, ಹೊಸಕೆರೆಹಳ್ಳಿ*
*ಭ್ರಷ್ಟಾಚಾರ ರಂಗದಲ್ಲಿನ ಸಾಧಕರಿಗೆ ಪದ್ಮ ಪ್ರಶಸ್ತಿಗಳನ್ನು ಏಕೆ ಕೊಡಬಾರದು?*
ಪದ್ಮ ಎಂದರೆ ನರಕ ಎಂಬ ಅರ್ಥವೂ ಇರುವುದರಿಂದ..... ಕೊಡಬಹುದು!

*ಕಾಳೀಹುಂಡಿ ಕೆ.ವಿ. ಶಿವಕುಮಾರ್, ಮೈಸೂರು*
*ಇಂದಿನ ಮಕ್ಕಳು ಅಜ್ಜ - ಅಜ್ಜಿಯಂದಿರ ಕಥೆಗಳಿಂದ ವಂಚಿತರಾಗುತ್ತಿದ್ದಾರಲ್ಲಾ...?*
ಚಿಂತೆ ಬೇಡ; ಗುರುರಾಜ ಕರಜಗಿಯವರ ಭಾಷಣ ಕೇಳಲು ಕಳುಹಿಸಿ; ಅವರಲ್ಲಿ ಇನ್ನೂ ಕಥೆಗಳು ಜೀವಂತವಾಗಿವೆ.

*ಎಂ.ಬಿ. ಖೋದಾನಪುರ, ಸವದತ್ತಿ*
*ಸಲೀಂ-ಅನಾರ್ಕಲಿಯರು ಮತ್ತೆ ಜನಿಸಿ ಬಂದರೆ?*
ಪಿಡಬ್ಲ್ಯೂಡಿ ಕಂಟ್ರಾಕ್ಟರ್ ಕಟ್ಟಿದ ಗೋಡೆಯನ್ನು ಸುಲಭವಾಗಿ ಒಡೆದು ಓಡಿಹೋಗಿ ಮದುವೆಯಾಗಬಹುದು!

*ಕೊ.ಸು. ನರಸಿಂಹಮೂರ್ತಿ, ಮೈಸೂರು*
*ಮುಖ್ಯಮಂತ್ರಿಗಳು ರಾತ್ರಿಯೆಲ್ಲಾ? ನಾ ಬಿಡೆ, ನಾ ಬಿಡೆ? ಎಂದು ಕನವರಿಸುತ್ತಿದ್ದರಂತೆ?*



ಅಧಿಕಾರವನ್ನು ವರಿಸಿ, worry ಆವರಿಸಿದರೆ, ಕನ-ವರಿಸುವುದು ಸಹಜವೇ!

ರಾಮ್